# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1498 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ. ವಿವೇಕಾನಂದ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18-12-2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಮೊಕದ್ದಮೆಗಳಿಗೆ ಅಥವಾ ಪ್ರಕರಣಗಳಿಗೆ ಸಾಕ್ಷಿಗಳಾಗಿ ಪರಿಗಣಿಸಲು ಇರುವ ಮಾನದಂಡಗಳೇನು; | ರಾಜ್ಯದ ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಪ್ರಕರಣಗಳಿಗೆ ಸಾಕ್ಷಿಗಳಾಗಿ ಪರಿಗಣಿಸಲು ಪ್ರತ್ಯೇಕವಾದ ಮಾನದಂಡ ಇರುವುದಿಲ್ಲ.<br><br>ಆದರೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ – 2023 ರ ಕಲಂ: 179 ಮತ್ತು 180ರ ಪ್ರಕಾರ ಪ್ರಕರಣದ ಘಟನೆಯ ಬಗ್ಗೆ ಮಾಹಿತಿ ಇರುವ ವ್ಯಕ್ತಿಗಳನ್ನು, ಪ್ರತ್ಯಕ್ಷ ಸಾಕ್ಷಿದಾರರನ್ನು, ಸಾಂದರ್ಭಿಕ ಸಂಗತಿಗಳನ್ನು ಅರಿತ ವ್ಯಕ್ತಿಗಳನ್ನು ಸಾಕ್ಷಿಗಳನ್ನಾಗಿ ವಿಚಾರಿಸಲು ಘಟಕಾಧಿಕಾರಿಗಳಿಗೆ ಅವಕಾಶ ಮಾಡಿಕೊಡಲಾಗಿದೆ. |
| (ಆ) | ರಾಜ್ಯದ ಕೆಲವು ಪ್ರಕರಣಗಳಿಗೆ ಪಂಚನಾಮೆ ಮಾಡಿಸಲು ಸರ್ಕಾರಿ ಅಧಿಕಾರಿಗಳನ್ನೇ ಪರಿಗಣಿಸಲು ನಿಯಮಾವಳಿ ಇದೆಯೇ; | ರಾಜ್ಯದ ಪ್ರಕರಣಗಳಿಗೆ ಪಂಚನಾಮೆ ಮಾಡಿಸಲು ಸರ್ಕಾರಿ ಅಧಿಕಾರಿಗಳನ್ನೇ ಪರಿಗಣಿಸಲು ಯಾವುದೇ ನಿಯಮಾವಳಿಗಳು ಇರುವುದಿಲ್ಲ. |
| (ಇ) | ಮೊಕದ್ದಮೆ ಅಥವಾ ಪಂಚನಾಮೆ ಮಾಡಲು ಶಾಲಾ ಕಾಲೇಜುಗಳ ಅವಧಿಯಲ್ಲಿ ಕರ್ತವ್ಯ ನಿರತ ಬೋಧಕರನ್ನು ಕರೆದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ, |
| (ಈ) | ಬಂದಿದ್ದರೆ ಈ ಶಾಲಾ ಕಾಲೇಜುಗಳ ಬೋಧಕರನ್ನು ಪಂಚನಾಮೆ ಕೆಲಸವನ್ನು ಮಾಡಿಸುವ ಕಾರ್ಯದಿಂದ ಕೈಬಿಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? | ಈ ಪ್ರಶ್ನೆಯು ಉದ್ಭವಿಸುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 109 ಪಿಸಿಕ್ಯೂ 2025**

**( ಡಾ: ಜಿ.ಪರಮೇಶ್ವರ )**
ಗೃಹ ಸಚಿವರು.